# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯ ಪಶು ಸಂಗೋಪನೆ ಇಲಾಖೆಯ ವೇತನೇತರ ವೆಚ್ಚಕ್ಕಾಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹೊರಗುತ್ತಿಗೆ ಸಿಬ್ಬಂದಿಯವರ ಸಂಭಾವನೆಗಾಗಿ ಮರು ಹೊಂದಾಣಿಕೆ ಮೂಲಕ ಒದಗಿಸಿರುವ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಸರ್ಕಾರದ ಆದೇಶ ಸಂಖ್ಯೆ: ಆಇ 483 ಬಿ.ಆರ್.ಎಸ್. 2020 ದಿನಾಂಕ:8.3.2021
3. ಸರ್ಕಾರದ ಆದೇಶ ಸಂಖ್ಯೆ: ಆಇ 525 ಬಿ.ಆರ್.ಎಸ್. 2020 ದಿನಾಂಕ: 12.3.2021

**ಪ್ರಸ್ತಾವನೆ:**

ರಾಜ್ಯದ ವಿವಿಧಜಿಲ್ಲಾ/ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯ ಪಶು ಸಂಗೋಪನೆ ಇಲಾಖೆಯ ವೇತನೇತರ ವೆಚ್ಚಕ್ಕಾಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಸಂಭಾವನೆಗಾಗಿ ಮೇಲೆ (2) ಮತ್ತು (3)ರಲ್ಲಿ ಓದಲಾದ ಆದೇಶಗಳ ಮೂಲಕ ಅನುಕ್ರಮವಾಗಿ ರೂ. 30.00ಲಕ್ಷ ಮತ್ತು ರೂ.1871.60ಲಕ್ಷ ಒಟ್ಟಾರೆ ರೂ.1901.60ಲಕ್ಷಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2403 ಮತ್ತು 2225ರಡಿ ಮರು ಹೊಂದಾಣಿಕೆ ಮೂಲಕ ಹೆಚ್ಚುವರಿಯಾಗಿ ಒದಗಿಸಿದೆ.

ಮರು ಹೊಂದಾಣಿಕೆ ಮೂಲಕ ಹೆಚ್ಚುವರಿ ಒದಗಿಸಿರು ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 176 ವೆಚ್ಚ 6/2021(ಇ) ದಿನಾಂಕ: 17ನೇ ಮಾರ್ಚ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಕಾಲಂ 3 ಕಾರ್ಯಕ್ರಮದಡಿ ಬಾಕಿ/ಪ್ರಸಕ್ತ ಸಾಲಿನವೇತನ/ಸಂಭಾವನೆ ವೆಚ್ಚಕ್ಕಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 4ರ ಲೆಕ್ಕ ಶೀರ್ಷಿಕೆಯಡಿ ಕಾಲಂ 5ರ ಒಟ್ಟು ರೂ.1901.60ಲಕ್ಷ (ರೂಪಾಯಿ ಒಂದು ಸಾವಿರದ ಒಂಬೈನೂರ ಒಂದು ಲಕ್ಷದ ಅರವತ್ತು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಕೂಡಲೇ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆಗೊಳಿಸತಕ್ಕದ್ದು.)

ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ಜಿಲ್ಲಾ ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಪಶು ಸಂಗೋಪನೆ/ಸಮಾಜ ಕಲ್ಯಾಣ ಇಲಾಖೆ
4. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಿಸಿದತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
7. ಸಂಬಂಧಿಸಿದ ಜಿಲ್ಲಾ/ಉಪ ಖಜಾನಾಧಿಕಾರಿಗಳು
8. ರಕ್ಷಾ ಕಡತಕ್ಕೆ 9.ಹೆಚ್ಚುವರಿ ಪ್ರತಿ

ಸರ್ಕಾರದ ಆದೇಶ ಸಂಖ್ಯೆ: ಆಇ 176 ವೆಚ್ಚ 6/2021 (ಇ) ದಿನಾಂಕ:17.3.2021ಕ್ಕೆಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲಾ/ ತಾಲ್ಲೂಕು | ಕಾರ್ಯಕ್ರಮದ ಲೆಕ್ಕಶೀರ್ಷಿಕೆ | ಬಿಡುಗಡೆಗೊಳಿಸಿದ ಲೆಕ್ಕ ಶೀರ್ಷಿಕೆ | ಬಿಡುಗಡೆಗೊಳಿಸಿದ ಮೊತ್ತ | ಒಟ್ಟು |
|---|---|---|---|---|---|
| 1 | ಬೆಂಗಳೂರು ಪೂರ್ವ | 2403-00-101-0-61-090 | 2403-00-197-1-01-401 | 30.00 | 30.00 |
| 2 | ಚಿತ್ರದುರ್ಗ | 2225-00-101-0-29-034 | 2225-01-196-1-01-403 | 36.00 | 36.00 |
| 3 | ತುಮಕೂರು | 2225-00-101-0-29-034<br>2225-00-101-0-32-034 | 2225-01-196-1-01-406 | 178.12<br>2.70 | 180.82 |
| 4 | ಮೈಸೂರು | 2225-00-101-0-29-034<br>2225-00-101-0-32-034 | 2225-01-196-1-01-407 | 215.81<br>5.00 | 220.81 |
| 5 | ಮಂಡ್ಯ | 2225-00-101-0-29-034 | 2225-01-196-1-01-412 | 82.62 | 82.62 |
| 6 | ಧಾರವಾಡ | 2225-00-101-0-29-034<br>2225-00-101-0-32-034 | 2225-01-196-1-01-415 | 9.64<br>0.44 | 10.08 |
| 7 | ಬಳ್ಳಾರಿ | 2225-00-101-0-29-034<br>2225-00-101-0-32-034 | 2225-01-196-1-01-418 | 191.21<br>3.15 | 194.36 |
| 8 | ಬೀದರ್ | 2225-00-101-0-29-034<br>2225-00-101-0-32-034 | 2225-01-196-1-01-419 | 22.40<br>19.20 | 41.60 |
| 9 | ಕೊಪ್ಪಳ | 2225-00-101-0-29-034 | 2225-01-196-1-01-466 | 169.65 | 169.65 |
| 10 | ಯಾದಗಿರಿ | 2225-00-101-0-29-034 | 2225-01-196-1-01-421 | 51.00 | 51.00 |
| 11 | ದೊಡ್ಡಬಳ್ಳಾಪುರ<br>ಹೊಸಕೋಟೆ | 2225-00-101-0-61-034 | 2225-01-97-1-01-402 | 13.29<br>2.07 | 15.36 |
| 12 | ಮೊಳಕಾಲ್ಮೂರು<br>ಚಿತ್ರದುರ್ಗ | 2225-00-101-0-61-034 | 2225-01-97-1-01-403 | 30.00<br>5.00 | 35.00 |
| 13 | ಕುಣಿಗಲ್<br>ಗುಬ್ಬಿ<br>ಕೊರಟಗೆರೆ | 2225-00-101-0-61-034 | 2225-01-97-1-01-406 | 4.65<br>17.75<br>13.10 | 35.50 |
| 14 | ಹುಣಸೂರು<br>ಕೆ.ಆರ್.ನಗರ<br>ಪಿರಿಯಾಪಟ್ಟಣ<br>ನಂಜನಗೂಡು<br>ಟಿ.ನರಸೀಪುರ<br>ಹೆಚ್.ಡಿ.ಕೋಟೆ<br>ಮೈಸೂರು | 2225-00-101-0-61-034 | 2225-01-97-1-01-407 | 3.00<br>2.50<br>2.00<br>6.00<br>6.00<br>4.50<br>6.16 | 30.16 |

| | | | | | |
|---|---|---|---|---|---|
| 15 | ಕೆ.ಆರ್.ಪೇಟೆ<br>ಮದ್ದೂರು<br>ಮಳವಳ್ಳಿ<br>ಮಂಡ್ಯ<br>ನಾಗಮಂಗಲ<br>ಪಾಂಡವಪುರ<br>ಶ್ರೀರಂಗಪಟ್ಟಣ | 2225-00-101-0-61-034 | 2225-01-97-1-01-412 | 13.27<br>21.36<br>31.38<br>44.76<br>10.79<br>15.76<br>8.37 | 145.69 |
| 16 | ಧಾರವಾಡ<br>ಹುಬ್ಬಳ್ಳಿ | 2225-00-101-0-61-034 | 2225-01-97-1-01-415 | 2.81<br>6.00 | 8.81 |
| 17 | ಬಳ್ಳಾರಿ<br>ಹೊಸಪೇಟೆ<br>ಕೂಡ್ಲಗಿ<br>ಹರಪನಹಳ್ಳಿ<br>ಸಿರಗುಪ್ಪ<br>ಸಂಡೂರು<br>ಹಗರಿಬೊಮ್ಮನಹಳ್ಳಿ<br>ಹೂವಿನಹಡಗಲಿ | 2225-00-101-0-61-034 | 2225-01-97-1-01-418 | 30.00<br>25.99<br>25.00<br>30.00<br>30.00<br>10.00<br>20.00<br>25.00 | 195.99 |
| 18 | ಬಸವಕಲ್ಯಾಣ<br>ಭಾಲ್ಕಿ<br>ಹುಮ್ನಾಬಾದ್ | 2225-00-101-0-61-034 | 2225-01-97-1-01-419 | 48.00<br>20.00<br>12.00 | 80.00 |
| 19 | ಯಾದಗಿರಿ<br>ಶಹಾಪುರ<br>ಸುರಪುರ | 2225-00-101-0-61-034 | 2225-01-97-1-01-421 | 53.89<br>42.68<br>61.43 | 158.00 |
| 20 | ಕೊಳ್ಳೇಗಾಲ<br>ಗುಂಡ್ಲುಪೇಟೆ | 2225-00-101-0-61-034 | 2225-01-97-1-01-456 | 10.00<br>4.40 | 14.40 |
| 21 | ಕೊಪ್ಪಳ<br>ಗಂಗಾವತಿ<br>ಯಲಬುರ್ಗಾ<br>ಕುಷ್ಟಗಿ | 2225-00-101-0-61-034 | 2225-01-97-1-01-466 | 27.75<br>55.35<br>41.77<br>40.88 | 165.75 |
| | **ಒಟ್ಟು** | | | **1901.60** | **1901.60** |